ಮಧ್ಯಮ ಹಾಗೂ ಭಾರಿ ಕೈಗಾರಿಕೆಗಳು ತಮ್ಮ ಯೋಜನೆಗಳಿಗೆ ಖರೀದಿಸುವ ಯಂತ್ರೋಪಕರಣಗಳ ಮೇಲಿನ ಪ್ರವೇಶ ತೆರಿಗೆಯನ್ನು ಮನ್ನಾ ಮಾಡಲಾಗಿದೆ. ಮೂಲಭೂತ ಸೌಕರ್ಯ ಅಂದರೆ ಕೈಗಾರಿಕಾ ನಿವೇಶನ ಮತ್ತು ಮಳಿಗೆಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ಸಣ್ಣ ಕೈಗಾರಿಕಾ ನಿಗಮದ ಮುಖಾಂತರ ಒದಗಿಸಲಾಗುತ್ತಿದೆ. ಜಿಲ್ಲೆಯಲ್ಲಿ 50 ಅತಿ ಸಣ್ಣ ಕೈಗಾರಿಕೆಗಳಿಗೆ 2003–04ನೇ ಸಾಲಿನಲ್ಲಿ ರೂ.40,06,420/– ಸಸಹಾಯಧನ ಮಂಜೂರಾಗಿದ್ದು ಬಿಡುಗಡೆಯನ್ನು ನಿರೀಕ್ಷಿಸಲಾಗುತ್ತಿದೆ.

2658 (2458) ಶ್ರೀ ಹಾಲಪ್ಪ ಹೆಚ್. (ಹೊಸನಗರ) :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಎಕರೆ ಹಿಪ್ಪುನೇರಳೆ (ರೇಷ್ಮೆಗಾಗಿ) ಬೆಳೆಯಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು);

ಆ) ಇಲಾಖೆಯಿಂದ ರೈತರಿಗೆ ಯಾವ ಯಾವ ಸವಲತ್ತುಗಳನ್ನು ನೀಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು);

ಇ) ಹಿಪ್ಪುನೇರಳೆ (ರೇಷ್ಮೆ) ಪ್ರೋತ್ಸಾಹಿಸಲು ಯಾವ ಯಾವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ (ವಿವರ ನೀಡುವುದು)?

ಶ್ರೀ ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ) ಶಿವಮೊಗ್ಗ ಜಿಲ್ಲೆಯಲ್ಲಿ 559.15 ಎಕರೆಗಳಲ್ಲಿ ಹಿಪ್ಪುನೇರಳೆ ವ್ಯವಸಾಯವಿದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ಕ್ರ.ಸಂ	ತಾಲ್ಲೂಕು	ಹಿಪ್ಪುನೇರಳೆ ವಿಸ್ತೀರ್ಣ(ಎಕರೆಗಳಲ್ಲಿ)
1	ಶಿವಮೊಗ್ಗ	122.15
2	ಭದ್ರಾವತಿ	195.05
3	ಸೊರಬ	6.20
4	ಸಾಗರ	53.00
5	ಶಿಕಾರಿಪುರ	58.00
6	ತೀರ್ಥಹಳ್ಳಿ	62.00
7	ಹೊಸನಗರ	62.15
	ಒಟ್ಟು	**559.15**

ಆ) 2004ನೇ ಸಾಲಿನ ಫೆಬ್ರವರಿ – 05 ಅಂತ್ಯಕ್ಕೆ ರೈತರಿಗೆ ನೀಡಲಾಗಿರುವ ಸೌಲಭ್ಯಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಕೆಳಕಂಡ ಸೌಲಭ್ಯಗಳು ಒದಗಿಸಲಾಗುತ್ತಿದೆ.

1. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ.

2. ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗಳಿಗೆ ಸಹಾಯಧನ.

3. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಣೆಗೆ ಸಹಾಯಧನ.

4. ರೋಗ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳ ಸರಬರಾಜು.

5. ಚಾಕಿ ಸಾಕಾಣಿಕೆ ಕೇಂದ್ರಗಳ ನಿರ್ಮಾಣ ಮತ್ತು ಸಲಕರಣೆಗಳಿಗೆ ಸಹಾಯಧನ.

6. ಹೊಸದಾಗಿ ರೇಷ್ಮೆ ಕೃಷಿ ಕೈಗೊಳ್ಳುವ ರೈತರಿಗೆ ತರಬೇತಿ ಮತ್ತು ಟೂಲ್‌ಕಿಟ್ ನೀಡುವುದು.

7. ಕಿಸಾನ್ ನರ್ಸರಿ ಯೋಜನೆಯಡಿ ಹೊಸ ಹಿಪ್ಪುನೇರಳೆ ತಳಿ ಅಭಿವೃದ್ಧಿಗೆ ಪ್ರೋತ್ಸಾಹಧನ

8. ಬ್ಯಾಂಕುಗಳಿಂದ ಸಾಲ ಸೌಲಭ್ಯ ಒದಗಿಸುವುದು.

9. ನೂತನ ತಾಂತ್ರಿಕತೆಗಳ ಅನುಸರಣೆಗಾಗಿ ತರಬೇತಿ.

10. ಬೆಳೆದ ಗೂಡುಗಳ ವಿಲೇವಾರಿಗೆ ಗೂಡು ಮಾರುಕಟ್ಟೆಗಳ ಸ್ಥಾಪನೆ.

11. ಹೊಸ ಪ್ರದೇಶದಲ್ಲಿ ಉತ್ಪಾದಿಸಿ ಸ್ಥಳೀಯ ಮಾರುಕಟ್ಟೆಗಳಲ್ಲಿ ವಹಿವಾಟು ಮಾಡಿದ ಪ್ರತಿ ಕೆ.ಜಿ.ಗೂಡಿಗೆ ರೂ.5.00 ರ ಪ್ರೋತ್ಸಾಹಧನ.

2660 (2765) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾರಿಗೊಳಿಸಲಾಗುತ್ತಿರುವ ವಿಶೇಷ ಆರ್ಥಿಕ ವಲಯ ಯೋಜನೆಯ ವಿವರಗಳೇನು;

ಆ) ಯಾವ ವರ್ಗದ ಕೈಗಾರಿಕೆಗಳನ್ನು ಈ ಯೋಜನೆಯ ಅಡಿಯಲ್ಲಿ ಪ್ರಮುಖವಾಗಿ ಅಹ್ವಾನಿಸಲಾಗುವುದೆ;

ಇ) ಈ ಯೋಜನೆಗಾಗಿ ಮಿತಿಗೊಳಿಸಿದ ಭೂಮಿಯ ಸ್ವಾಧೀನದ ವಿವರಗಳೇನು;

ಈ) ಭೂ ಮಾಲೀಕರಿಗೆ ಪರಿಹಾರವಾಗಿ ನೀಡುವ ಸೌಲಭ್ಯ ಮತ್ತಿತರ ವಿವರಗಳೇನು;